O.S No. 55/2017

DW–2 – ಭಕ್ತ ವತ್ಸಲ ಶೆಟ್ಟಿ

Date: 14.01.2026

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿಗಳ ಪರ ಶ್ರೀ ಟಿ.ಟಿ.ಎಸ್. ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಿನಾಂಕಃ 17.12.1983 ರ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಡಿ.7 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದ ಮ್ಯುಟೇಷನ್ ರಿಜಿಸ್ಟರ್ ನ್ನು ನಿ.ಡಿ. 8 ಎಂದು ಗುರುತಿಸಲಾಯಿತು. ಒಂದು ಕೈ ಬರಹ ಪಹಣಿ ಪತ್ರಿಕೆಯ ಮತ್ತು ಸಂಕೀರ್ಣ ವಹಿಗಳನ್ನು ದೃಡೀಕರಿಸಿದ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಡಿ.9 ಮತ್ತು 10 ಎಂದು ಗುರುತಿಸಲಾಯಿತು. ಇನ್ನೊಂದು ಮ್ಯುಟೇಷನ್ ರಿಜಿಸ್ಟರ್ ನ ಮತ್ತು ಕೈಬರಹದ ಪಹಣಿ ಪತ್ರಿಕೆಯ ದೃಢೀಕರಿಸಿದ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಡಿ.11 ಮತ್ತು 12 ಎಂದು ಗುರುತಿಸಲಾಯಿತು. 6 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಒಟ್ಟಾಗಿ ನಿ.ಡಿ. 13 ಎಂದು ಗುರುತಿಸಲಾಯಿತು. ದಿನಾಂಕಃ 13.03.2008 ರ ಕ್ರಯ ಪತ್ರದ ದೃಡೀಕರಿಸಿದ ಪ್ರತಿಯನ್ನು ನಿ.ಡಿ. 14 ಎಂದು ಗುರುತಿಸಲಾಯಿತು. ಮ್ಯುಟೇಷನ್ ರಿಜಿಸ್ಟರ್ ನ ದೃಢೀಕರಿಸಿದ ಪ್ರತಿಯನ್ನು ನಿ.ಡಿ. 15 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಳ್ಳಕೆರೆ